Dr. R. NAGAN GOWDA.—During the years 1953-54 and 1954-55 up-to-date figures are given.

ಶ್ರೀ ಎ. ವಿ. ನರಸಿಂಹರೆಡ್ಡಿ.—ಪ್ರಶ್ನೆ ಕೇಳಿರುವುದು. ಇಲ್ಲಿಯತನಕ ಎಷ್ಟು pump setsಗಳನ್ನು ಕೊಟ್ಟಿದ್ದೀರಿ ಎಂದು. ಅದನ್ನು ಹೇಳುವುದಕ್ಕೆ ಸಾಧ್ಯ ವಿದೆಯೇ?

Dr. R. NAGAN GOWDA.—The question was about the number of irrigation pumps supplied to each village in Hoskote and Anekal taluks. Period is not mentioned. ಆದಕಾರಣ ನಾವು ಈ ವರ್ಷದ ಮತ್ತು ಹಿಂದಿನ ವರುಷದ ಸಂಖ್ಯೆಯನ್ನು ಕೊಟ್ಟಿದ್ದೇವೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಪ್ರಶ್ನೆ ಇರುವುದು ಇಲ್ಲಿಯತನಕ ಈ ತಾಲ್ಲೂಕ್‌ಗಳಲ್ಲಿ ಎಷ್ಟು pump sets ಗಳನ್ನು ಕೊಟ್ಟಿದ್ದೀರಿ ಎಂದು. ನೀವು ಎರಡು ವರ್ಷಗಳಿಗೆ ಉತ್ತರ ಮಾತ್ರ ಕೊಟ್ಟಿದ್ದೀರಿ. ಪ್ರಾರಂಭ ದಿಂದ ಎಷ್ಟು ಕೊಟ್ಟಿದ್ದೀರಿ ಎಂದು ಹೇಳಲು ಸಾಧ್ಯವೇ?

Dr. R. NAGAN GOWDA.—Notice.

ಶ್ರೀ ಎ. ವಿ. ನರಸಿಂಹರೆಡ್ಡಿ.—Pump set ಗಳನ್ನು 1954-55ನೇ ಸಾಲಿನಲ್ಲಿ ಎಷ್ಟು ಕೊಟ್ಟಿದ್ದೀರಿ? ಮತ್ತು 1953-54ನೇ ಸಾಲಿನಲ್ಲಿ ಎಷ್ಟು ಕೊಟ್ಟಿದ್ದೀರಿ?

Dr. R. NAGAN GOWDA.—I am unable to give that, Sir. It is for both the years that the figures are given.

ಶ್ರೀ ಎ. ವಿ. ನರಸಿಂಹರೆಡ್ಡಿ.—ಅರ್ಜಿಗಳು pending ಇವೆ ಎಂದು ಹೇಳಿದ್ದೀರಿ? ಅವು ಎರಡು ವರ್ಷಗಳಿಂದ ಬಂದಿರುವುವೇ ಅಥವಾ ಇನ್ನೂ ಬೇರೆ ಯಾವವಾದರೂ ಅದರಲ್ಲಿ ಸೇರಿವೆಯೇ?

ಡಾ॥ ಆರ್. ನಾಗನಗೌಡ.—ಅವು ಈಗ ನಮ್ಮ ಹತ್ತಿರ pending ಇರುವುವು. ಅರ್ಜಿಗಳು ಯಾವಾಗ ಬಂದುವು ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿ.—ನಾವು ಇನ್ನೂ ಕರೆಂಟ್ ಕೊಡಬೇಕಾದರೆ ಇನ್ನೂ ಉಳಿದಿರುವುದು 32 ಮತ್ತು 14 ಅರ್ಜಿಗಳು ಮಾತ್ರವೇ ಅಲ್ಲವೇ?

ಅಧ್ಯಕ್ಷರು.—ಅದನ್ನು ಹೇಳಿದ್ದಾರೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—1953-54 ಮತ್ತು 1954-55 ಸಾಲುಗಳಿಗೆ ಮಾತ್ರ ಹೇಳಿದ್ದಾರೆ. ಹಿಂದಿನ ಅರ್ಜಿಗಳು ಇದ್ದೇ ಇರಬೇಕು. ಅವೆಲ್ಲಾ ಒಟ್ಟು ಎಷ್ಟು?

ಅಧ್ಯಕ್ಷರು.—'Notice' ಎಂದು ಹೇಳಿದರು.

ಶ್ರೀ ಎ. ವಿ. ನರಸಿಂಹರೆಡ್ಡಿ.—ದಯವಿಟ್ಟು ವಿಚಾರಣೆ ಮಾಡಿ commercial crops ಬೆಳೆಯತಕ್ಕ ಈ ಎರಡು ತಾಲ್ಲೂಕ್‌ಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸು ವುದಕ್ಕೆ ಏರ್ಪಾಡು ಮಾಡುತ್ತೀರಾ?

ಡಾ॥ ಆರ್. ನಾಗನಗೌಡ.—ಮೊದಲೇ ಹೇಳಿದ ಹಾಗೆ ಹೊಸಕೋಟೆಗೆ sub-unit ಏರ್ಪಾಡು ಮಾಡಿ ದ್ದೇವೆ. ಮತ್ತು frequency conversion ಬಹಳ ಬೇಗ ಮಾಡಿ ಆನೇಕಲ್ಲಿಗೆ ಹೊಸದಾಗಿ ವಿದ್ಯುಚ್ಛಕ್ತಿ ಯನ್ನು ಕೊಡುವ ಪ್ರಯತ್ನದಲ್ಲಿ ಇದ್ದೇವೆ. ಎಷ್ಟು ಬೇಗನೆ ಬೇಕೋ ಅಷ್ಟು ಬೇಗನೆ ಕೊಡಲು ನಾವು ಪ್ರಯತ್ನಮಾಡುತ್ತೇವೆ.

ಶ್ರೀ ಜಿ. ಪಾಪಣ್ಣ.—Frequency Conversion ಆದರೂ ಕೂಡ ಹೆಚ್ಚಾಗಿ ವಿದ್ಯುಚ್ಛಕ್ತಿಯನ್ನು ಕೊಡು ವುದಕ್ಕಾಗುವುದಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಡಾ॥ ಆರ್. ನಾಗನಗೌಡ.—ಸ್ವಲ್ಪಮಟ್ಟಿಗೆ ಹೆಚ್ಚಾಗಿ ಕೊಡುವುದಕ್ಕೆ ಆಗುತ್ತದೆ. ಈಗ ಇರುವುದ ಕ್ಕಿಂತಲೂ ಹೆಚ್ಚಾಗಿ ಕೊಡುತ್ತೇವೆ.

ಶ್ರೀ ಜಿ. ಪಾಪಣ್ಣ.—50 ಸೈಕಲ್ ಲೈನ್ overload ಆಗಿದೆ. Frequency Conversion ಮಾಡಿದರೂ ಈಗಿರುವುದಕ್ಕಿಂತ ಹೆಚ್ಚಾಗಿ ಕೊಡುವುದಕ್ಕೆ ಆಗುವುದಿಲ್ಲ ವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಡಾ॥ ಆರ್. ನಾಗನಗೌಡ.—ಈಗ ಕೊಟ್ಟಿರುವುದ ಕ್ಕಿಂತಲೂ ಸ್ವಲ್ಪ ಹೆಚ್ಚಾಗಿ ಕೊಡುವುದಕ್ಕೆ technically ಅನುಕೂಲವಿದೆ ಎಂದು ಹೇಳಿದ್ದಾರೆ.

ಶ್ರೀ ಬಿ. ಟಿ. ಕೆಂಪರಾಜ್.—Pump setಗಳನ್ನು ಒದಗಿಸಬೇಕಾದರೆ ಎಷ್ಟು ದಿನಗಳಾಗುತ್ತವೆ?

ಡಾ॥ ಆರ್. ನಾಗನಗೌಡ.—ಅಲ್ಲಿ ಇರುವ ಸಂದರ್ಭ ಗಳ ಮೇಲೆ ಹೋಗುತ್ತದೆ. ಆದರೆ ನಮ್ಮ ಸರಕಾರ ದಲ್ಲಿ ವಿದ್ಯುಚ್ಛಕ್ತಿಯನ್ನು ಕೊಡಲು ಎಷ್ಟು ಕಾಲ ತೆಗೆದುಕೊಳ್ಳುತ್ತಾರೆಂಬುದನ್ನು ಇನ್ನೊಂದು ಸರ್ಕಾರ ದೊಡನೆ ಹೋಲಿಸಿ ನೋಡಿದರೆ ನಾವು ಬೇರೆಯವರಿ ಗಿಂತ ಸ್ವಲ್ಪ ಜಾಗ್ರತೆಯಾಗಿ ವಿದ್ಯುಚ್ಛಕ್ತಿಯನ್ನು ಕೊಡು ತ್ತಿದ್ದೇವೆ ಎಂದು ಹೇಳಬಹುದು.

ಶ್ರೀ ಬಿ. ಟಿ. ಕೆಂಪರಾಜ್.—Pending ಇರುವ ಕೇಸುಗಳಲ್ಲಿ ವಿದ್ಯುಚ್ಛಕ್ತಿ ಕೊಡುವುದಕ್ಕಾಗುವುದಿಲ್ಲ ವೆಂದು ಅಧಿಕಾರಿಗಳು ತಕರಾರು ಹಾಕಿಕೊಂಡು ಪಾರ್ಟಿಗಳಿಗೆ ತೊಂದರೆ ಮಾಡುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಡಾ॥ ಆರ್. ನಾಗನಗೌಡ.—ವಿನಾಕಾರಣ ತೊಂದರೆ ಮಾಡುತ್ತಾ ಇದ್ದರೆ, ಅವರ ಮೇಲೆ ಕಾರ್ಯ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಟಿ. ಕೆಂಪರಾಜ್.—Deposit ಕೊಟ್ಟಿದ್ದರೂ pumps ಕೊಡದೆ ಮಾಫೀರುಗಳು ಹಾಕದೆ charges ಹೆಚ್ಚಾಗಿ ವಸೂಲು ಮಾಡುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ?

Mr. SPEAKER.—It does not arise out of this question.

Power Supply to certain Villages of Chiknaikanahalli Taluk.

Q.—564. Sri C. H. LINGADEVARU (Chiknaikanahalli).—

Will the Government be pleased to state:—

(*a*) whether power supply to Bellara Gold Mines is not saved due to stoppage of work there;

(*b*) whether the people of Thimmanahalli, Chiknaikanahalli Taluk, have not requested for the supply of power to irrigation pump sets and also deposited the necessary amount;

(*c*) whether estimates are prepared for supplying electricity from Bellara to (i) Thimmanahally and Kanthikere and (ii) Huliyar and Kenkere villages;

(*d*) whether they would take action to supply the power immediately?

A.—**Dr. R. NAGAN GOWDA** (Minister for Agriculture).—

(*a*) Yes.

(*b*) Yes.

(*c*) Yes, for Thimmanahalli only.

(*d*) The work pertaining to Thimmanahalli is being taken up as soon as possible. The question does not arise with regard to the other villages as no applications with deposits have been received.

ಶ್ರೀ ಸಿ. ಎಚ್. ಲಿಂಗದೇವರು.—ಬೆಳ್ಳಾರ ಚಿನ್ನದ ಗಣಿಗಳು ಈಗ ಮುಚ್ಚಿರುವುದರಿಂದ ಎಷ್ಟು ವಿದ್ಯುಚ್ಛಕ್ತಿ ಅವರಿಗೆ ಸರಬರಾಜು ಮಾಡುತ್ತಿದ್ದುದು ಉಳಿತಾಯವಾಗುತ್ತಿದೆ ?

Dr. R. NAGAN GOWDA.—I think about 150 kilowatts.

ಶ್ರೀ ಸಿ. ಎಚ್. ಲಿಂಗದೇವರು.—ಹಾಗೆ ಉಳಿತಾಯವಾಗುವ ವಿದ್ಯುಚ್ಛಕ್ತಿಯನ್ನು ಸುತ್ತಮುತ್ತಲ ಗ್ರಾಮಗಳಿಗೆ ಒದಗಿಸುವ ಯೋಚನೆ ಮಾಡಿದ್ದೀರಾ ?

Dr. R. NAGAN GOWDA.—Please repeat your question.

ಶ್ರೀ ಸಿ. ಎಚ್. ಲಿಂಗದೇವರು.—ಈ ಪವರ್ ಉಳಿತಾಯವಾಗಿದೆಯಲ್ಲಾ, ಆ ಪವರನ್ನು ಸುತ್ತಮುತ್ತಲ ಗ್ರಾಮಗಳನ್ನು electrify ಮಾಡುವುದಕ್ಕೆ ಉಪಯೋಗಿಸುವುದನ್ನು ಪರಿಶೀಲನೆ ಮಾಡಿದ್ದೀರಾ ?

ಡಾ॥ ಆರ್. ನಾಗನಗೌಡ,—ಅಲ್ಲಿ ಉಳಿತಾಯವಾಗುವ ಪವರನ್ನು ತಿಮ್ಮನಹಳ್ಳಿಗೆ ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಸಿ. ಎಚ್. ಲಿಂಗದೇವರು.—ಹುಳಿಯಾರು, ಕನಿಕೆರೆ ಗ್ರಾಮಗಳವರು ವಿದ್ಯುಚ್ಛಕ್ತಿ ಕೊಡಬೇಕೆಂದು ಕೇಳಿರಲಿಲ್ಲವೇ ?

ಡಾ॥ ಆರ್. ನಾಗನಗೌಡ.—ಕೇಳಿದ್ದಾರೆ.

ಶ್ರೀ ಸಿ. ಎಚ್. ಲಿಂಗದೇವರು,—ಅದಕ್ಕೆ ಎಸ್ಟಿಮೇಟ್ ಏನಾದರೂ ಮಾಡಿಸಿದ್ದೀರಾ ?

Dr. R. NAGAN GOWDA.—No applications with deposits have been received either from Kenkere, Huliyar or from Kenkere Villages.

ಶ್ರೀ ಸಿ. ಎಚ್. ಲಿಂಗದೇವರು.—ಆ Village Electrificationನ್ನಿಗೇನಾದರೂ ಎಸ್ಟಿಮೇಟ್ ತಯಾರು ಮಾಡಿದ್ದೀರಾ ?

Dr. R. NAGAN GOWDA.—Notice.

ಶ್ರೀ ಸಿ. ಎಚ್. ಲಿಂಗದೇವರು.—ಮುಂದೆಯಾದರೂ ಇದನ್ನು ಪರಿಶೀಲನೆ ಮಾಡಿಸಿ ಎಸ್ಟಿಮೇಟ್ ತಯಾರಿಸುತ್ತೀರಾ ?

ಡಾ॥ ಆರ್. ನಾಗನಗೌಡ.—ಪರಿಶೀಲಿಸುತ್ತೇವೆ.

Provincial Toll-Gate near Tarikere

Q.—194. **Sri T. C. BASAPPA** (Tarikere).—

Will the Government be pleased to state:—

(*a*) when the Provincial Toll-Gate (on the B.H. and T.M. Road about 2 miles from Tarikere Town) was established;

(*b*) the rates of toll and the commodities or vehicles on which toll is collected;

(*c*) whether representation has not been made to them to abolish these toll-gates within the State;

(*d*) whether they would consider the desirability of abolishing the Toll-Gate near Tarikere Town early ?

A.—**Sri H. SIDDAVEERAPPA** (Minister for Home and Industries).—

(*a*) 1936-37.

(*b*) *Vide* II Schedule to the Mysore Motor Vehicles Taxation and Tolls Act, 1951.

(*c*) There have been proposals in some cases.

(*d*) The question will be examined.

ಶ್ರೀ ಟಿ. ಸಿ. ಬಸಪ್ಪ.—1952ನೆಯ ಇಸವಿಯಿಂದೀಚೆಗೆ ಎಷ್ಟು provincial toll-gateಗಳನ್ನು abolish ಮಾಡಿದ್ದೀರಿ ?

Sri H. SIDDAVEERAPPA.—That figure is not readily available with me, Sir.

ಶ್ರೀ ಟಿ. ಸಿ. ಬಸಪ್ಪ.—ತರೀಕೆರೆಗೆ ಎರಡು ಮೈಲಿ ದೂರದಲ್ಲಿ ಈ ಟೋಲ್ ಗೇಟ್ ಇರುವುದು ಗೊತ್ತಿದೆಯೆ?

ಶ್ರೀ ಎಚ್. ಸಿದ್ದವೀರಪ್ಪ.—ಗೊತ್ತಿದೆ.

ಶ್ರೀ ಟಿ. ಸಿ. ಬಸಪ್ಪ.—ಈ ಊರಿಗೆ ಈ ಎರಡು ಕಡೆಯ ಟೋಲ್ ಗೇಟ್‌ಗಳಲ್ಲೂ ಸುಂಕ ವಸೂಲು ಮಾಡುತ್ತಿರುವುದು ಜನರಿಗೆ ತೊಂದರೆಯೆಂಬುದು ಗೊತ್ತಿದೆಯೆ?

ಶ್ರೀ ಎಚ್. ಸಿದ್ದವೀರಪ್ಪ.—ಬಹಳ ವರ್ಷಗಳಿಂದ ಇದು ನಡೆದುಕೊಂಡು ಬಂದಿದೆ. ತಾವು ತಗೆಯ ಬೇಕೆಂದು ಹೇಳುತ್ತಿದ್ದೀರಿ. ಆದಷ್ಟು ಜಾಗ್ರತೆ ಯೋಚನೆ ಮಾಡಿ ತೀರ್ಮಾನಕ್ಕೆ ಬರುತ್ತೇವೆ.

Sri K. PUTTASWAMY.—For a similar question put by me, the same answer was given to me during the last session. May I know what steps the Government have taken in this behalf; whether levying such a toll is legal ?

Sri H. SIDDAVEERAPPA.—Well, Sir, so far as this question is concerned, it often comes for discussion in the Conference of Transport Ministers of all States. The view of the Government of India is that the inter-toll gates will have to be abolished in the larger interests of the promotion of trade. I am also, more or less, of the same view. I am getting it examined.